ಅಸಲು ದಾವೆ ಸಂಖ್ಯೆ- 28/2015
ಪಿಡಬ್ಲ್ಯೂ- 01
ದಿನಾಂಕಃ 06.08.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ. ಯು ಕೆ ಕೆ ವಕೀಲರಿಂದ</u>

ಬಸನಗೌಡ ನನ್ನ ಅಣ್ಣ. ನಿಪಿ-1 ರಲ್ಲಿ ಇರುವ ಹೆಸರು ನನ್ನ ಅಣ್ಣ ಬಸನಗೌಡನದು. ನಾನು ಮತ್ತು ನನ್ನ ಅಣ್ಣ ವಾಟ್ನಿ ಮಾಡಿಕೊಂಡಿರುತ್ತೇವೆ. ಬಸನಗೌಡ ತೀರಿಕೊಂಡಿರುತ್ತಾನೆ. ಅವನ ಹೆಂಡತಿ ಮಕ್ಕಳು ಜೀವಂತ ಇರುತ್ತಾರೆ. ಅವನ ಹೆಂಡತಿ ಹೆಸರು ನಿಂಬವ್ವ ಬಸನಗೌಡ ಪಾಟೀಲ, ಮಕ್ಕಳ ಹೆಸರು ವಿನಾಯಕ ಮತ್ತು ವಿಶ್ವನಾಥ ಪಾಟೀಲ. ವಿಶ್ವನಾಥ ಇಂಜೀನಿಯರ್ ಇರುತ್ತಾನೆ, ವಿನಾಯಕ ವ್ಯವಸಾಯ ಮಾಡುತ್ತಾನೆ. ವಿನಾಯಕ ನಮ್ಮ ಊರಿನಲ್ಲಿಯೇ ವಾಸಿಸುತ್ತಾನೆ. ನಿಂಬವ್ವ ಬೆಂಗಳೂರಿನಲ್ಲಿ ವಾಸಿಸುತ್ತಾಳೆ. ನಾವು ಹಾಜರುಪಡಿಸಿರುವ ನಿಪಿ-1 ಬಸನಗೌಡನ ಪಾಲಿನ ಆಸ್ತಿಯ ಉತಾರೆ ಇರುತ್ತದೆ. ಬಸನಗೌಡನ ವಾರಸುದಾರರನ್ನು ದಾವೆಯಲ್ಲಿ ಕಕ್ಷಿಗಾರರನ್ನಾಗಿ ಮಾಡಿಲ್ಲ. ಸದರಿ ಆಸ್ತಿ ಬಸನಗೌಡನಿಗೆ ಹೋಗಿದ್ದರಿಂದ ಅದರಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ, ನಾವು ಒಟ್ಟಿಗೆ ಇರುತ್ತೇವೆ. ನಿಪಿ-1 ಆಸ್ತಿ ನಂ.170/ಬಿ ನೇದ್ದರಲ್ಲಿ ಜಂಟಿಯಾಗಿ ನಮ್ಮ ಹೆಸರು ಇರುವುದಿಲ್ಲ. ಬಸನಗೌಡನ ಹೆಂಡತಿ ಮತ್ತು ಮಕ್ಕಳು ಸದರಿ ದಾವಾ ಆಸ್ತಿಯಲ್ಲಿ ತಮ್ಮ ಹಕ್ಕು ಇರುತ್ತದೆ ಅಂತಾ ದಾವೆ ಮಾಡಿಲ್ಲ ಎಂದರೆ ಸರಿ. ಅವರನ್ನು ಕಕ್ಷಿಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾವು ಮತ್ತು ಬಸನಗೌಡ ಪಾಟೀಲ ಇವರ ಹೆಂಡತಿ ಮಕ್ಕಳು ಕೂಡಿಯೇ ಇರುತ್ತೇವೆ ಅಂತಾ ತೋರಿಸಲು ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಆಸ್ತಿಯಲ್ಲಿ ನನ್ನ ಹಿತಾಸಕ್ತಿ ಇದೆ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತವರಮೆಳ್ಳಿಹಳ್ಳಿ ಗ್ರಾಮದಲ್ಲಿ ದಾವಾ ಆಸ್ತಿ ಯಾರದು ಅಂತಾ ತೋರಿಸಲು ನಕಾಶೆ ಇದೆ. ನಕಾಶೆ ಹಾಜರುಪಡಿಸಿಲ್ಲ. ಪ್ರತಿವಾದಿಯರ ತಂದೆ ನಮ್ಮ ವಿರುದ್ಧ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂ.136/1996 ಪ್ರತಿವಾದಿಯರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಿಂಬವ್ವ, ವಿನಾಯಕ ಮತ್ತು ವಿಶ್ವನಾಥ ಪ್ರತಿವಾದಿಯರಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು 3 ನೇ ಪ್ರತಿವಾದಿ

ಇದ್ದೆ ಎನ್ನುವುದು ಸರಿ. ಆ ದಾವೆಯಲ್ಲಿ ಕೈಫಿಯತ್ತ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯರು ಕಚ್ಚಾ ನಕಾಶೆ ಹಾಜರುಪಡಿಸಿದ್ದರು ಮತ್ತು ನಾವು ಸಹ ಕಚ್ಚಾ ನಕಾಶೆ ಹಾಜರುಪಡಿಸಿದ್ದೆವು ಎಂದರೆ ಸರಿ. ಈಗ ನಾನು ನೋಡುತ್ತಿರುವ ಅಸಲು ದಾವೆ ನಂ.136/1996 ರಲ್ಲಿನ ಪ್ರತಿವಾದಿ ನಂ.2 ಹಾಜರುಪಡಿಸಿರುವ ಕಚ್ಚಾ ನಕಾಶೆಯಲ್ಲಿರುವ ಸಹಿ ವಿರುಪಾಕ್ಷಿ ಪಾಟೀಲ ಇತನದು ಇರುತ್ತದೆ. ಸದರಿ ಕಚ್ಚಾ ನಕಾಶೆಯಲ್ಲಿ ಕ್ಯೂ.ಪಿ.ಡಬ್ಲ್ಯೂ.ಝಡ್ ಅಂತಾ ಗುರುತಿಸಿರುವ ಸಾಮೂಹಿಕ ದಾರಿ ಕುರಿತು  ಸದರಿ ದಾವೆ ಇತ್ತು ಎಂದರೆ ಸರಿ. ಸದರಿ ನಕಾಶೆಯಲ್ಲಿ ತೋರಿಸಿದಂತೆ ಕ್ಯೂ.ಪಿ ದಿಂದ ಗುರುತಿಸಿರುವ ಜಾಗದ ಪಶ್ಚಿಮಕ್ಕೆ ಒಂದು ಶೆಡ್ ಇತ್ತು ಎನ್ನುವುದು ಸರಿ. ಪಿ. ಡಬ್ಲ್ಯೂ ದಾರಿ ಅಗಲ ಅಂದಾಜು 10 ಪೂಟು ಇರಬಹುದು. ಸದರಿ 10 ಪೂಟು ಬಿಟ್ಟು ಶೆಡ್ ಇತ್ತು ಅದರೊಳಗೆ ಇರಲಿಲ್ಲ. ಈಗ ನಾನು ನೋಡುತ್ತಿರುವ ಅಸಲು ದಾವೆ ನಂ.136/1996 ರ ಕೈಫಿಯತ್ತನ ದೃಡಿಕೃತ ನಕಲು ಇರುತ್ತದೆ ಅದನ್ನು ನನ್ನ ಸಹೋದರ ವಿರೂಪಾಕ್ಷಪ್ಪ ಸಲ್ಲಿಸಿದ ಕೈಫಿಯತ್ತ ಇರುತ್ತದೆ, ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ಅಸಲು ದಾವೆ ನಂ.136/1996 ರ ಕೈಫಿಯತ್ತನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಕಚ್ಚಾ ನಕಾಶೆ ಸದರಿ ಕೈಪಿಯತ್ತನೊಂದಿಗೆ ಸಲ್ಲಿಸಿರುವ ಕಚ್ಚಾ ನಕಾಶೆಯಾಗಿರುತ್ತದೆ ಅದನ್ನು ನಿಡಿ-1ಎ ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನಾನೇ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿ. ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಾಕ್ಷಿ ಹೇಳಿಲ್ಲ ಎಂದರೆ ಸರಿ. ಎಲ್ಲ ನನ್ನ ಸಹೋದರರ ಪರವಾಗಿ ನಾನೇ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿ ಒಂದು ಮ್ಯಾಪ್ ಹಾಜರುಪಡಿಸಿರುತ್ತಾನೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಅಸಲು ದಾವೆ ನಂ.136/1996 ಲ್ಲಿ ನಾನು ಸಾಕ್ಷಿ ಹೇಳುವ ಮೊದಲು ವಾದಿಯರು ಯಾವ ಕಾರಣಕ್ಕೆ ದಾವೆ ಸಲ್ಲಿಸಿರುತ್ತಾರೆ, ಯಾವ ದಾಖಲೆಗಳನ್ನು ಸಲ್ಲಿಸಿರುತ್ತಾರೆ ಸಂಪೂರ್ಣವಾಗಿ ತಿಳಿದುಕೊಂಡು ಸಾಕ್ಷಿ ನುಡಿದಿರುತ್ತೇನೆ. ಸಾಕ್ಷಿಗೆ ಸದರಿ ದಾವೆಯಲ್ಲಿ ವಾದಿಯರು ಹಾಜರುಪಡಿಸಿದ ಕಚ್ಚಾ ನಕಾಶೆ ತೋರಿಸಿ ಇದೇ ನಕಾಶೆಯನ್ನು ಅವರು ಹಾಜರುಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಕಾಶೆಯಲ್ಲಿ ಶೆಡ್ಡನ್ನು ತೋರಿಸಿರುತ್ತಾರೆ ಎಂದರೆ ಸರಿ, ಆದರೆ ಅದು ಅನಧೀಕೃತ ಇರುತ್ತದೆ. (ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಅದನ್ನು ನಿಶಾನೆ ಅಂತಾ ಗುರುತಿಸಲು ವಿನಂತಿಸಿರುತ್ತಾರೆ, ಸದರಿ ದಾಖಲೆಯನ್ನು ಪ್ರತಿವಾದಿ ಕಡೆಯಿಂದ ಅವರ ಮುಖ್ಯ ವಿಚಾರಣೆಯಲ್ಲಿ ಗುರುತಿಸಬಹುದಾಗಿದೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡಿರುವುದಿಲ್ಲ, ಆದ್ದರಿಂದ ನಿಶಾನೆ ಅಂತಾ ಗುರುತಿಸಿರುವುದಿಲ್ಲ. )

ಈ ದಾವೆಯಲ್ಲಿ ಯಾವ ಆಸ್ತಿ ಎಲ್ಲಿ ಇರುತ್ತದೆ ಅಂತಾ ತೋರಿಸಿ ಕಚ್ಚಾ ನಕಾಶೆ ಹಾಜರುಪಡಿಸಿಲ್ಲ. ಸದರಿ ದಾವಾ ಆಸ್ತಿ ನಂ.171/ಬಿ ಅಂತಾ ತೋರಿಸಲು ನಕಾಶೆ ಹಾಜರುಪಡಿಸಿಲ್ಲ. ಸದರಿ ಅಸಲು ದಾವೆ ನಂ.136/1996 ರಲ್ಲಿ ಬಂಗಾರಪ್ಪ ಮತ್ತು ಆತನ ಮಕ್ಕಳು ಕೋರಿದಂತೆ ವಾದಿಯರ ನಕಾಶೆಯಲ್ಲಿ ತೋರಿಸಿದಂತೆ ರಸ್ತೆಯಲ್ಲಿರುವ ಶೆಡ್ಡನ್ನು ತೆಗೆದುಹಾಕಬೇಕು ಅಂತಾ ನ್ಯಾಯಾಲಯ ಆದೇಶ ಮಾಡಿರುತ್ತದೆ ಎಂದರೆ ಸರಿ, ಅದರಂತೆ ನಾವು ಶೆಡ್ಡನ್ನು ತೆಗೆದಿರುತ್ತೇವೆ. ಸದರಿ ತೀರ್ಪಿನ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ ಎನ್ನುವುದು ಸರಿ. ಅದರ ಸಂಖ್ಯೆ ಆರ್ ಎ. ನಂ.90/2005 ಎಂದರೆ ಸರಿ. ಸದರಿ ಶೆಡ್ಡ ತೆಗೆದ ನಂತರ ಪೂರ್ವಕ್ಕೆ ಖುಲ್ಲಾ ಜಾಗೆ ಅಳತೆ 30 x 95 ಪೂಟು ಇರುತ್ತದೆ. ಪೂರ್ವ-ಪಶ್ಚಿಮ 30, ಉತ್ತರ-ದಕ್ಷಿಣ 95 ಇರುತ್ತದೆ. ಸದರಿ ಜಾಗೆಯ ಪೂರ್ವಕ್ಕೆ ನಮ್ಮ ಕಿಡಕಿಗಳು ಇದ್ದವು ಎಂದರೆ ಸರಿ. ನಿಡಿ-1 ಎ ದಲ್ಲಿ ಡಬ್ಲ್ಯೂ.ಝಡ್ ಗೋಡೆಯ ನಂತರ ಉತ್ತರಕ್ಕೆ ನಮ್ಮ ಮನೆ, ಸದರಿ ಮನೆಯ ದಕ್ಷಿಣಕ್ಕೆಪ್ರತಿವಾದಿಯರ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಗೆ ನಾವು ಹರಕತ್ತು ಮಾಡಬಾರದು ಅಂತಾ ನ್ಯಾಯಾಲಯ ಆದೇಶ ಮಾಡಿರುತ್ತದೆ ಎಂದರೆ ಸರಿಯಲ್ಲ. ಈ ಆಸ್ತಿಯ ಪಶ್ಚಿಮದ ಕಡೆಗೆ ಇರುವ ಆಸ್ತಿ 23 ಪೂಟು ಅಗಲ 85 ಪೂಟು ಉದ್ದ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅರ್ಧ ನನ್ನದು, ಅರ್ಧ ಈ ಪ್ರಕರಣದ ಪ್ರತಿವಾದಿಯರದು ಇರುತ್ತದೆ ಅಂತಾ ನುಡಿಯುತ್ತಾರೆ. ಅರ್ಧ ನನ್ನದು ಇರುವುದಿಲ್ಲ, ಒಟ್ಟು 23 x 85 ಆಸ್ತಿ ಈ ದಾವೆಯ ಪ್ರತಿವಾದಿಯರದು ಅಂತಾ ಘೋಷಿಸಿರುತ್ತಾರೆ ಎನ್ನುವುದು ಸರಿಯಲ್ಲ. ನಿಡಿ-1 ಎ ದಲ್ಲಿ ಪಿ ಕ್ಯೂ ಪಶ್ಚಿಮಕ್ಕೆ ತೋರಿಸಿರುವ ಪ್ರತಿವಾದಿಯರ ಮನೆ ಅಂದರೆ ಬಸವಂತಗೌಡ ಇವರ ಮನೆ ಎಂದರೆ ನಿಜ. ಬಸವಂತಗೌಡ ಇತನ ಮನೆಯ ಪೂರ್ವಕ್ಕೆ ಇರುವ ಉತ್ತರ ದಕ್ಷಿಣಕ್ಕೆ ಇದ್ದ ಶೆಡ್ ನ್ಯಾಯಾಲಯದ ಆದೇಶದ ನಂತರ ತೆಗೆಸಿರುತ್ತೇವೆ ಎಂದರೆ ಸರಿ. ನ್ಯಾಯಾಲಯದ ಆದೇಶದ ನಂತರ ಪಾಟೀಲ ವಕೀಲರು ಕೋರ್ಟ ಕಮೀಷನರ್ ಅಂತಾ ಬಂದು ಅಳತೆ ಮಾಡಿ ನಂತರ ಶೆಡ್ಡನ್ನು ತೆಗೆದಿರುತ್ತಾರೆ ಎಂದರೆ ಸರಿ. ಆಸ್ತಿ ನಂ.170 ಎ, 170 ಬಿ ಯಲ್ಲಿ ಮನೆ ಜಾಗೆ ಮತ್ತು ಪಡ ಜಾಗೆ ಇರುತ್ತದೆ. ಸದರಿ ಆಸ್ತಿ 23 x 85 ನಾವು ದಾವಾ ಆಸ್ತಿ ಅಂತಾ ಹೇಳುವ ಆಸ್ತಿ ಪ್ರತಿವಾದಿಯರ ಮಾಲ್ಕಿ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯ ನಂ.21/ಸಿ1 ಅಂತಾ ಇರುತ್ತದೆ ಎಂದರೆ ಸರಿಯಲ್ಲ. ಈಗ ನಾವು ಹೇಳುವ ಆಸ್ತಿ ಅಸ್ತಿತ್ವದಲ್ಲಿರುತ್ತದೆ, ಅದು 21/ಸಿ1 ಇರಲಿ ಅಥವಾ 170/ಬಿ ಇರಲಿ ಅದು ಪ್ರತಿವಾದಿಯರ ಮಾಲ್ಕಿ ಆಸ್ತಿ ಎನ್ನುವುದು ಸರಿಯಲ್ಲ. ಸದರಿ ಆಸ್ತಿ ದಾವೆ ಆಸ್ತಿಯಾಗಿದ್ದು ನಾನು ತಪ್ಪು ಚಕಬಂದಿ ಮತ್ತು ನಂಬರು ತೋರಿಸಿ ನನ್ನದು ಅಂತಾ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ಆಸ್ತಿಯನ್ನು 136/1996 ರಲ್ಲಿ ಈ ಪ್ರಕರಣದ ಪ್ರತಿವಾದಿಯರ ಆಸ್ತಿ

ಅಂತಾ ಘೋಷಿಸಿರುತ್ತಾರೆ ಎಂದರೆ ಸರಿಯಲ್ಲ, ಮತ್ತು ನಿರ್ಬಂಧಕಾಜ್ಞೆ ಸಹ ಹೊರಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಆಸ್ತಿಯ ಉತ್ತರಕ್ಕೆ ಹೂವಿನಗಿಡ ಇರುತ್ತವೆ ಮತ್ತು ದಕ್ಷಿಣಕ್ಕೆ ಬಯಲುಜಾಗೆ ಇರುತ್ತದೆ ಎಂದರೆ, ಅದು ಪ್ರತಿವಾದಿಯರ ಆಸ್ತಿಯಲ್ಲಿ ಇರುತ್ತದೆ. ಸದರಿ 23 x 85 ಆಸ್ತಿಯಲ್ಲಿ ಪ್ರತಿವಾದಿಯರೇ ಈಗಲೂ ಸಹ ಕಬ್ಜೆ ವಹಿವಾಟಿಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ಮನೆತನದ ಮೂಲ ಪುರುಷ ಬಸನಗೌಡ, ಆತನಿಗೆ ನಾಲ್ಕು ಜನ ಮಕ್ಕಳು. ಅವರ ಹೆಸರು ವಿರೂಪಾಕ್ಷಗೌಡ, ವೀರನಗೌಡ, ಬಸವಂತಪ್ಪಗೌಡ ಮತ್ತು ತಮ್ಮನಗೌಡ. ಇವರ ನಡುವೆ 1947 ರಲ್ಲಿ ಹಿಸ್ಸೆ ಆಗಿರುತ್ತದೆ. ಸದರಿ ಹಿಸ್ಸಾ ಪ್ರಕಾರ ದಾಖಲೆ ಆಗಿರುತ್ತವೆ. ಸದರಿ ಹಿಸ್ಸೆದ ದಾಖಲೆಗಳನ್ನು ಬಂಗಾರೆಪ್ಪ ಅಸಲು ದಾವೆ ನಂ.136/1996 ರಲ್ಲಿ ಹಾಜರುಪಡಿಸಿದ್ದರು ಎಂದರೆ ಸರಿ, ಆದರೆ ಅವು ನಮಗೆ ಸಂಬಂಧ ಇಲ್ಲ. ಏಕೆಂದರೆ ಅವುಗಳಲ್ಲಿ ಅಳತೆ, ಅಂಕಿ-ಸಂಖ್ಯೆ ಇರುವುದಿಲ್ಲ. ಸದರಿ ದಾವೆ ಹೂಡುವಾಗ ದೊಡ್ಡಮನೆ ಅಂತಾ ತೋರಿಸಿ ಅದರಲ್ಲಿ ಹಿಸ್ಸಾಗಳನ್ನು ತೋರಿಸಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ವಾಟ್ನಿ ಪತ್ರದ ಪ್ರಕಾರ ದೊಡ್ಡಮನೆ ಅಂತಾ ತೋರಿಸಿರುವ ನಕಾಶೆಯಲ್ಲಿ ಚಕಬಂದಿಗಳನ್ನು ತೋರಿಸಿರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.